**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**

**ಸಿ.ಸಿ.ನಂಃ 1161/2023**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

**-: ವಿರುದ್ಧ :-**

**ಆರೋಪಿಃ** ಶ್ರೀ ಪ್ರಕಾಶ,
ಬಿನ್ ಶ್ರೀ ರಾಮದಾಸಪ್ಪ,
45 ವರ್ಷಗಳು,
ವಾಸಃ ಸೊಕ್ಕೆ ತಿಮ್ಮಾಪುರ ಗ್ರಾಮ,
ಅಜ್ಜಂಪುರ ತಾಲ್ಲೂಕು.

**ದೋಷಾರೋಪಣೆ**

ಶ್ರೀ. ರಾಹುಲ್ ಶೆಟ್ಟಿಗಾರ್, ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 14.06.2022 ರಂದು ಸಂಜೆ 7.00 ಗಂಟೆ ಸುಮಾರಿಗೆ ಅಜ್ಜಂಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸೊಕ್ಕೆತಿಮ್ಮಾಪುರ ಗ್ರಾಮದ ಕೊರಚರ ಬೀದಿಯ ಸಾರ್ವಜನಿಕ ರಸ್ತೆಯಲ್ಲಿ ನೀವು ಆರೋಪಿ 90 ಎಂ ಎಲ್ ನ 30 ರಾಜಾ ವಿಸ್ಕಿ ಹಾಗೂ 180 ಎಂ ಎಲ್ ನ 6 ಬ್ಯಾಗ್‌ಪೈಪರ್ ನ 6 ಟೆಟ್ರಾ ಪ್ಯಾಕ್‌ಗಳನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮಾರಾಟ ಮಾಡುತ್ತಿದ್ದಾಗ ಚಾಸಾ-1 ರವರು ಚಾಸಾ-4 ರಿಂದ 7 ರವರೊಂದಿಗೆ ದಾಳಿ ಮಾಡಿದ ಕಾಲಕ್ಕೆ ಸಿಕ್ಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಹಾಗೂ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿ ಉತ್ತರಃ Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ?

ಆರೋಪಿ ಉತ್ತರಃ Pleaded not guilty and claimed to be tried

(ಆರೋಪಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ದಿನಾಂಕ: 15.02.2025.

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕೆರೆ.

**ಆರೋಪಿ ಸಹಿಃ**